ದಿನಾಂಕಃ **06.01.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **2** ನೇ ಪ್ರತಿವಾದಿ ಪರ ವಕೀಲರಿಂದಃ

**19.** ಅಸ್ವಾಳು ಗ್ರಾಮದಲ್ಲಿ ಸರ್ವೆ ನಂಃ **60** ರಲ್ಲಿ **2** ಎಕರೆ **18** ಗುಂಟೆ ಜಮೀನು ನಿಮ್ಮ ಅಣ್ಣನಿಗೆ ಸಾಗುವಳಿ ಒಟ್ಟು ಕುಟುಂಬದಲ್ಲಿ ಇದ್ದಾಗ ತೆಗೆದುಕೊಂಡಿದ್ದಾರೂ ಅಥವಾ ಬೇರೆ ಹೋದ ನಂತರ ತೆಗೆದುಕೊಂಡಿದ್ದಾರೂ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದಲ್ಲಿ ಇದ್ದಾಗ ತೆಗೆದುಕೊಂಡಿರುವುದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಬೇರೆ ಹೋದ ಮೇಲೆ ತೆಗೆದುಕೊಂಡಿರುವುದು ಎನ್ನುತ್ತಾರೆ. ಎಷ್ಟು ವರ್ಷಗಳ ಹಿಂದೆ ಅವರು ಬೇರೆ

ಹೋಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. **1995** ಕ್ಕೂ ಮೊದಲು ಬೇರೆಯಾಗಿದ್ದಾರೂ ಅಥವಾ ನಂತರ ಬೇರೆಯಾಗಿದ್ದಾರೂ ಎಂದರೆ ಸಾಕ್ಷಿ ನನಗೆ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಸದರಿ **2** ಎಕರೆ **18** ಗುಂಟೆ ಜಮೀನು ನನ್ನ ಅಣ್ಣ **1** ನೇ ಪ್ರತಿವಾದಿಗೆ ಮೇ **1995** ರಲ್ಲಿ ಸಾಗುವಳಿಯಲ್ಲಿ ಮಂಜೂರಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅವರು ಸರ್ಕಾರಿ ಕೆಲಸದಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಅವರು **1995** ರಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದರೂ ಇಲ್ಲವೂ ನನಗೆ ಗೊತ್ತಿಲ್ಲ.

**20.** ಮೈಸೂರಿನ ಮಾದೇಗೌಡರು ನನ್ನ ಸಂಬಂಧಿ. ಅವರು ಕಾಂಗ್ರೇಸ್‌ನ ಮುಖಂಡರು ಎಂದರೆ ಸರಿ. ಸದರಿ ಮಾದೇಗೌಡರ ಸಮಕ್ಷಮ ನನ್ನ ತಂದೆಯ ಕಾಲಾವಧಿಯಲ್ಲಿ ವಿಭಾಗಕ್ಕೆ ಸಂಬಂಧಪಟ್ಟಂತೆ ಮಾತುಕತೆ ನಡೆದಿತ್ತು. ಮಾದೇಗೌಡರ ಸಮಕ್ಷಮದಲ್ಲಿ ನಿಮ್ಮ ಭಾಗಕ್ಕೆ ಕೊಡಬೇಕೆಂದು ಹೇಳಿದ ಸೈಟ್ ನ್ನು ಕೊಟ್ಟರೆ ಉಳಿದ ಆಸ್ತಿಗಳನ್ನು ನಿಮ್ಮ ಸಹೋದರರಿಗೆ ಬಿಟ್ಟುಕೊಡುತ್ತೀರಾ ಎಂದರೆ ಸಾಕ್ಷಿ ಇಲ್ಲ ನನಗೂ ಭಾಗ ಬೇಕು ಎನ್ನುತ್ತಾರೆ. ಆಗ ಮಾದೇಗೌಡರು **1** ನೇ ಪ್ರತಿವಾದಿ ನನ್ನ ಅಣ್ಣನಿಗೆ ಮಾತುಕತೆಯ ಪ್ರಕಾರ ಪತ್ರ ಮಾಡಿಕೊಂಡು ಬರಲು ಹೇಳಿದ್ದು ಆಗ ಅವರು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಪತ್ರವನ್ನು ತಯಾರಿಸಿಕೊಂಡು ಬಂದಿದ್ದ ಕಾರಣ ನನ್ನ ತಂದೆ ಆ ಪತ್ರದ ಪ್ರಕಾರ ಭಾಗ ಆಗಲು ಒಪ್ಪಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನೀವು , ನಿಮ್ಮ ಅಣ್ಣಂದಿರು ಹಾಗೂ ತಂದೆ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಯಾರು ಮಾಡಿಲ್ಲ ಎನ್ನುತ್ತಾರೆ. ಸದರಿ ವಿಭಾಗ ಪತ್ರ ಈಗಲೂ ಸಹ ನನ್ನ ಅಣ್ಣ **1** ನೇ ಪ್ರತಿವಾದಿಯ ಬಳಿ ಇದೆ ಎಂಬುದು ನನಗೆ ಗೊತ್ತಿಲ್ಲ. ಆ ವಿಭಾಗ ಪತ್ರಕೆ ನಿಮ್ಮ ತಂದೆ ಮಾದೇಗೌಡರ ಸಮಕ್ಷಮದಲ್ಲಿ ಹೆಬ್ಬೆಟ್ಟು ಗುರುತನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಹೆಬ್ಬೆಟ್ಟು ಗುರುತು ಹಾಕುತ್ತಿರಲಿಲ್ಲ, ಸಹಿ ಮಾಡುತ್ತಿದ್ದರು ಎನ್ನುತ್ತಾರೆ. **2008** ರಲ್ಲಿ ನನ್ನ ತಂದೆಗೆ ಪಾರ್ಶ್ವವಾಯು ಖಾಯಿಲೆ ಬಂತು. ಈ ರೀತಿ ಖಾಯಿಲೆ ಬಂದಿದ್ದು ಸುಳ್ಳು ಎಂದರೆ

ಸರಿಯಲ್ಲ. ಆ ತರಹ ಖಾಯಿಲೆ ಬಂದಿದೆ ಎಂದು ಹೇಳಿದ ನಂತರ ಅಮಲ್ಜಾರಿ ಅರ್ಜಿ **47/2010** ನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿ ಅದರಲ್ಲಿ ಹಾಜರಾಗುತ್ತಿದ್ದರು ಎಂದರೆ ಸಾಕ್ಷಿ ಹಾಜರಾಗುತ್ತಿದ್ದರು, ಅವರಿಗೆ ಪಾರ್ಶ್ವವಾಯು ಆದ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಪಾರ್ಶ್ವವಾಯು ಆದ ನಂತರ ನನ್ನ ತಂದೆಯ ಬಲಗೈ ಸ್ವಲ್ಪ ಅದುರುತ್ತಿತ್ತು. ಆ ರೀತಿ ಕೈ ಅದುರುತ್ತಿದ್ದ ಕಾರಣ ಅವರು ಸಹಿ ಮಾಡುತ್ತಿರಲಿಲ್ಲ, ಎಲ್ಲಾ ದಾಖಲೆಗಳಿಗೂ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಸಹಿ ಮಾಡಿದ ದಾಖಲೆಗಳನ್ನು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ಆ ರೀತಿ ಸಹಿಗಳನ್ನು ಹುಷಾರು ತಪ್ಪಿದ ಮೇಲೆ ಅವರು ಯಾವುದೇ ದಾಖಲೆಗಳಿಗೆ ಮಾಡಿಲ್ಲ ಎನ್ನುತ್ತಾರೆ. ಪಾರ್ಶ್ವವಾಯು ಆದ ನಂತರ ನಾಲ್ಕು ವರ್ಷಗಳ ಕಾಲ ನನ್ನ ತಂದೆ ಬದುಕಿದ್ದರು. ಆ ನಾಲ್ಕು ವರ್ಷಗಳ ಅವಧಿಯಲ್ಲಿ ಬ್ಯಾಂಕ್ ವ್ಯವಹಾರಗಳನ್ನು ನನ್ನ ತಂದೆಯೇ ಮಾಡಬೇಕಾಗಿತ್ತು ಎಂದರೆ ಸರಿ. ನನ್ನ ತಂದೆ ಯಾವುದೇ ಸಹಿಗಳನ್ನು ಆ ಅವಧಿಯಲ್ಲಿ ಮಾಡಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**21.** ಮೇಲೆ ಹೇಳಿದ ವಿಭಾಗ ಪತ್ರಕ್ಕೆ ನನ್ನ ತಂದೆಯ ಸಮ್ಮತಿ ಇಲ್ಲದ ಕಾರಣ ದಿಃ **24.04.2013** ರಂದು ಒಂದು ಮರಣ ಶಾಸನವನ್ನು ಬರೆದರು ಎಂದರೆ ಸರಿಯಲ್ಲ. ಅದರಲ್ಲಿ **1** ನೇ ಪ್ರತಿವಾದಿಗೆ **14** ಎಕರೆ, **2** ನೇ ಪ್ರತಿವಾದಿಗೆ **7** ಎಕರೆ, ಅವರ ಮಗ **3** ನೇ ಪ್ರತಿವಾದಿಗೆ **7** ಎಕರೆ ಜಮೀನನ್ನು ಉಯಿಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ವಿಲ್ ಮಾಡಿದ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ಅವರು ವಿಲ್ ನ್ನು ಮಾಡಿಲ್ಲ ಎನ್ನುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ವಿಲ್‌ನ ದೃಢೀಕೃತ ನಕಲನ್ನು ತೋರಿಸಲು ವಕೀಲರು ಮುಂದಾದಾಗ ವಾದಿ ಪರ ವಕೀಲರು ಅದಕ್ಕೆ ಆಕ್ಷೇಪಣೆ ಎತ್ತಿದ್ದು, ಮೂಲ ವಿಲ್ ಎಲ್ಲಿ ಇದೆ ಎಂದು ಅವರು ಹೇಳಿಲ್ಲ, ಅವರಿಗೆ ವಿಲ್ ಆಗಿದೆ ಎಂದು ಹೇಗೆ ಗೊತ್ತಾಯಿತು ಎಂದು ಹೇಳಿಲ್ಲ ಎಂದು ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲು

ಬರುವುದಿಲ್ಲವೆಂದು ಆಕ್ಷೇಪಣೆ ಎತ್ತಿದ್ದು, 2 ನೇ ಎದುರುದಾರರ ಪರ ವಕೀಲರು ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.